(ಇಂದು ದಿನಾಂಕಃ 10-12-2024 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ ಎಸ್.ಜೆ.ಎನ್. ವಕೀಲರಿಂದ**

ನಾನು 18 ವರ್ಷಗಳಿಂದ ಗೋಕರ್ಣದ ಗಂಜಿಗದ್ದೆಯಲ್ಲಿ ಟೇಲರಿಂಗ್ ಮತ್ತು ಫ್ಯಾನ್ಸಿ ಅಂಗಡಿ ವ್ಯಾಪಾರವನ್ನು ಮಾಡುತ್ತೇನೆ. ಸದರಿ ಅಂಗಡಿಯನ್ನು ಬಾಡಿಗೆಗೆ ನಡೆಸುತ್ತೇನೆ. ನನ್ನ ಟೇಲರಿಂಗ್ ಮತ್ತು ಫ್ಯಾನ್ಸಿ ಅಂಗಡಿಯ ಮಾಲೀಕರು ಸೋಮನಾಥ ಶೇಟ್ ಆಗಿರುತ್ತಾರೆ. ಈಗ ಸದರಿ ಅಂಗಡಿಯ ಬಾಡಿಗೆ ತಿಂಗಳಿಗೆ 6 ಸಾವಿರ ಇರುತ್ತದೆ. ನನಗೆ ಸದರಿ ಅಂಗಡಿಯಿಂದ ಸುಮಾರು ತಿಂಗಳಿಗೆ 20 ಸಾವಿರ ಆದಾಯ ಬರುತ್ತದೆ. ಸದರಿ 20 ಸಾವಿರದಲ್ಲಿ ಸದರಿ 6 ಸಾವಿರ ರೂ. ಅಂಗಡಿಯ ಬಾಡಿಗೆಯನ್ನು ಕಟ್ಟುತ್ತೇನೆ. ನನ್ನ ಮಕ್ಕಳ ವಿದ್ಯಾಭ್ಯಾಸ ಮುಗಿದಿರುತ್ತದೆ. ನನ್ನ ಮಕ್ಕಳ ವಿದ್ಯಾಭ್ಯಾಸ ಹಾಗೂ ಮನೆಯ ಜವಾಬ್ದಾರಿಯ ಖರ್ಚು ವೆಚ್ಚ ನನ್ನ ಗಂಡ ನೋಡಿಕೊಳ್ಳುತ್ತಾರೆ. ಆರೋಪಿಯು ನನ್ನ ಮನೆಯ ಪಕ್ಕದ ಮನೆಯವರಾಗಿರುವುದರಿಂದ ಮಾತಾಡಿ ಪರಿಚಯ ಇರುತ್ತದೆ. ಆರೋಪಿಯು ಕಾರವಾರ ಊರಿನವರಾಗಿದ್ದು, ಗೋಕರ್ಣದಲ್ಲಿ ವಾಸ್ತವ್ಯದಲ್ಲಿ ಇರುತ್ತಾರೆ. ಆರೋಪಿಯು 03-11-2021 ರಂದು ನನ್ನ ಬಳಿ 4 ಲಕ್ಷ 80 ಸಾವಿರ ಹಣವನ್ನು ಕೇಳಿರುತ್ತಾನೆ. ಆರೋಪಿಯು ನನ್ನ ಬಳಿ 5 ಲಕ್ಷದ ವರೆಗೆ ಹಣವನ್ನು ಕೇಳಿರುತ್ತಾರೆ. ಆರೋಪಿಯು ಶಸ್ತ್ರ ಚಿಕಿತ್ಸೆಗೆಂದು 5 ಲಕ್ಷ ಹಣವನ್ನು ಕೇಳಿದ್ದು, ನಾನು 4 ಲಕ್ಷ 80 ಸಾವಿರ ಹಣವನ್ನು ನೀಡಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರಳಾಗಿರುತ್ತೇನೆ. ನಾನು ಕಳೆದ 4 ವರ್ಷಗಳಿಂದ ಆದಾಯ ತೆರಿಗೆ ಪಾವತಿಸಿ ಬಂದಿರುತ್ತೇನೆ. ಈಗಲೂ ಸಹ ನಾನು ಆದಾಯ ತೆರಿಗೆ ಪಾವತಿದಾರಳಾಗಿರುತ್ತೇನೆ. ನಾನು ಆರೋಪಿಗೆ 4 ಲಕ್ಷ 80 ಸಾವಿರ ಹಣವನ್ನು ನನ್ನ ಸ್ವಂತ ಆದಾಯದಿಂದ ಹಾಗೂ ಸ್ವಲ್ಪ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡು ನೀಡಿರುತ್ತೇನೆ. ನಾನು ಲಕ್ಷ್ಮೀ ಫೈನೆನ್ಸನಿಂದ ಮೂರುವರೆ ಲಕ್ಷ ಸಾಲವನ್ನು ಪಡೆದುಕೊಂಡು ಆರೋಪಿಗೆ ನೀಡಿರುತ್ತೇನೆ.

ನಾನು ಲಕ್ಷ್ಮೀ ಫೈನೆನ್ಸನಿಂದ ಮೂರುವರೆ ಲಕ್ಷ ಸಾಲವನ್ನು ಪಡೆದ ದಿನಾಂಕ ಈಗ ನೆನಪಿಲ್ಲ. ಲಕ್ಷ್ಮೀ ಫೈನೆನ್ಸನಿಂದ ಮೂರುವರೆ ಲಕ್ಷ ಸಾಲ ಪಡೆದಿದ್ದೇನೆ ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಅಗತ್ಯವಿದ್ದಲ್ಲಿ ಹಾಜರುಪಡಿಸುವುದಾಗಿ ನುಡಿಯುತ್ತಾರೆ. 2021 ರಿಂದ 2024 ರವರೆಗಿನ ಆದಾಯ ಪಾವತಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಈಗಿನ ಕಾಲದಲ್ಲಿ 4 ಲಕ್ಷ 80 ಸಾವಿರ ಹಣ ಬಹುದೊಡ್ಡ ಮೊತ್ತ ಎಂದರೆ ಸರಿ. ನಾನು ಯಾರಿಗೆಲ್ಲ ಸಾಲವನ್ನು ನೀಡಿದ್ದೇನೆ ಎಂದು ಈಗ ಹೇಳಲು ನೆನಪಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ